ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ–ಹಂಪೆ



# ಸರ್ವಧರ್ಮ ತೇರು



ಹಂಪಿ ಟೈಮ್ಸ್ ವಿಶೇಷ ಮಾರ್ಚ್ 10, 2025

8,9 ಮತ್ತು 10 ಮಾರ್ಚ್ 2025 ಹಂಪಿ ಟೈಮ್ಸ್ HAMPI TIMES

# ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ

# ಗುರು–ಪರಂಪರೆ.....





ಹಂಪಿಹೇಮಕೂಟ ಶೂನ್ಯಸಿಂಹಾಸನ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ನಿರಂಜನ ಶಿವಾನುಭವ ಪೀಠ'ವು ಶ್ರೀ ಕಪ್ಪಿನ ಚನ್ನಬಸವ ಮಹಾಸ್ವಾಮಿಗಳಿಂದ(ಕ್ರಿಶ.1517) ಆರಂಭಗೊಂಡು ಸದ್ಯದ ಪೀಠಾಧಿಪತಿಗಳಾದ ಪೂಜ್ಯಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರೆಗೆ ನಿರಂತರವಾಗಿ ಸಮಾಜ ಸೇವೆಯನ್ನು ಮಾಡುತ್ತ ಬಂದಿದೆ. ಶ್ರೀ ಕಪ್ಪಿನ ಚೆನ್ನಬಸವ ಮಹಾಸ್ವಾಮಿಗಳು ದೇಶವನ್ನೆಲ್ಲ ಸಂಚರಿಸಿ ಧರ್ಮ ಜಾಗೃತಿಯನ್ನು ಮಾಡಿದ ವಿರಾಗಿಗಳು. ಇವರು ರಾಜಪೂಜಿತರೂ, ಜನಮಾನ್ಯರೂ ತಪೋನಿಧಿಗಳೂ ಆಗಿದ್ದರು. ಇವರ ಧಾರ್ಮಿಕ ಅಂದೋಲನದ ಕಾಲಘಟ್ಟದಲ್ಲಿ ಹಲವಾರು ಶಾಖಾಮಠಗಳು ಹುಟ್ಟಿಕೊಂಡವು. ಅವುಗಳಲ್ಲಿ ಹೊಸಪೇಟೆ, ಬಳ್ಳಾರಿ, ಹಂಪಿ, ಕುಡಿತಿನಿ, ಕುರುಗೋಡು ಮುಂತಾದ ಕ್ಷೇತ್ರಗಳಾಗಿವೆ.

ಬಳ್ಳಾರಿ ಅರಸು ಹನುಮಪ್ಪ ನಾಯಕನು ಶ್ರೀ ಕಪ್ಪಿನ ಚೆನ್ನಬಸವ ಸ್ವಾಮಿಗಳನ್ನು ತನ್ನ ರಾಜಗುರುಗಳನ್ನಾಗಿ ಸ್ವೀಕರಿಸಿ, ಮಾನ್ಯಮಾಡಿ, ಶ್ರೀ ಹೇಮಕೂಟ ಪೀಠಕ್ಕೆ ದಾನ ನೀಡಿದ ಒಕ್ಕಣಿಕೆಯಲ್ಲಿ ಶ್ರೀ ಕಪ್ಪಿನ ಚೆನ್ನಬಸವ ಮಹಾಸ್ವಾಮಿಗಳನ್ನು ಈ ಕೆಳಗಿನಂತೆ ಸ್ತುತಿಸಿ ಗೌರವಿಸಿರುವುದು ಕಂಡುಬರುತ್ತದೆ.

**ಶ್ರೀಮತ್ಪರಮ ಕೈಲಾಸ ಸಿಂಹಾಸನಾರೂಢ ಪರಶಿವ**
**ಲೀಲಾಕೃತ ಕಳೇವರಮಪ್ಪ ನಂದೀಶಾದಿ ರುದ್ರಪ್ರಮಥ**
**ಗಣಂಗಳ ಸಂಪ್ರದಾಯವಿಡಿದೊಪ್ಪುವ ತೋಂಟದ**
**ಸಿದ್ಧಲಿಂಗಾರ್ಯರ ಕೃಪಾಪ್ರಸನ್ನರಾದ ತದ್ಗುರು**
**ಬೋಧಾಮೃತ ರಸವಾಂತು ಉಪದೇಶಿಸುವಲ್ಲಿ**
**ಶರಣಜನ ಹೃದಯಾನಂದ ಭಕ್ತಜನ ಮುಖಪಂಕಜ**
**ದಿವಾಕರ ಷಟಸ್ಥಲ ಗ್ನಾನ ಪ್ರಭಾಪುಂಜ ರಂಜಿತ**
**ರಾಜರಾಜ ಶ್ರೀ ಹೇಮಕೂಟ ಸಿಂಹಾಸನಾಧ್ಯಕ್ಷರಾದ**
**ಶಿವಾನುಭ ಚರಮೂರ್ತಿಗಳಾದಂಥ ಕಪ್ಪಿನ**
**ಚನ್ನಬಸವ ದೇವರವರ ಪಾದಪದ್ಮಂಗಳ ಸನ್ನಿಧಾನಕ್ಕೆ**

–ಈ ರೀತಿಯಾಗಿ ಹಂಡೆ ಅರಸು ಹನುಮಪ್ಪ ನಾಯಕನು ಶ್ರೀ ಕಪ್ಪಿನ ಚನ್ನಬಸವ ಮಹಾಸ್ವಾಮಿಗಳವರ ಪಾದಪದ್ಮಂಗಳ ಸನ್ನಿಧಾನಕ್ಕೆ ಎನ್ನುವಲ್ಲಿ ರಾಜಾ ಹನುಮಪ್ಪ ನಾಯಕನು ಶ್ರೀ ಕಪ್ಪಿನ ಚೆನ್ನಬಸವ ಸ್ವಾಮಿಗಳ ಮೇಲೆ ಇಟ್ಟಿರುವ ಭಕ್ತಿ ಪ್ರೀತಿಗಳು ಗಮನಾರ್ಹವಾಗಿವೆ.

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಗುರುಪರಂಪರೆ ಮತ್ತು ಹಲವಾರು ಅರಸರ ದಾನದತ್ತಿಗಳ ಬಗ್ಗೆ ಮಠದಲ್ಲಿ ದೊರೆತ ದಾನಪತ್ರಗಳು, ತಾಮ್ರಪತ್ರಗಳು ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಶ್ರೀ ಗೌ.ಮ. ಉಮಾಪತಿಶಾಸ್ತ್ರಿಯವರು ಸಂಪಾದಿಸಿದ 'ಹಂಪೆಹೇಮಕೂಟ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಗುರುಪರಂಪರೆ' ಎಂಬ ಗ್ರಂಥವೇ ಮಠದ ಇತಿಹಾಸವನ್ನು ತಿಳಿಸುವ ಮೊದಲ ಕೃತಿಯಾಗಿದೆ. ಇಲ್ಲಿಯವರೆಗೂ ಮಠದ ಮೊದಲನೆ ಪೀಠಾಧಿಪತಿಗಳ ಕಾಲಮಾನ ಕ್ರಿ.ಶ. 1518 ಎಂದೇ ನಂಬಲಾಗಿತ್ತು. ಈ ಗ್ರಂಥದ ಆದಾರದ ಮೇಲೆ ಮತ್ತು ಇನ್ನೂ ಹೆಚ್ಚಿನ ಸಂಶೋಧನೆ ನಡೆಸಿದ ಪ್ರೊ. ಎಸ್.ಸಿ. ಪಾಟೀಲರು ಶ್ರೀ ಕಪ್ಪಿನ ಚೆನ್ನಬಸವ ಸ್ವಾಮಿಗಳ ಕಾಲಮಾನ ಕ್ರಿ.ಶ. 1517 ಎಂಬ ಐತಿಹಾಸಿಕ ಸಂಗತಿಯನ್ನು ಕಂಡುಹಿಡಿದಿದ್ದು, ಶ್ರೀಮಠದ ಇತಿಹಾಸಕ್ಕೆ ಮತ್ತಷ್ಟು ಮೆರಗನ್ನು ನೀಡಿದೆ.

ಬಳ್ಳಾರಿಯ ಪಾಳೆಯಗಾರ ಹನುಮಪ್ಪ ನಾಯಕನು ಶ್ರೀ ಕಪ್ಪಿನ ಚೆನ್ನಬಸವ ಮಹಾಸ್ವಾಮಿಗಳಿಗೆ ಕ್ರಿ.ಶ. 1517(ಶಾ.ಶ.1439)ರಲ್ಲಿ ನಾಲ್ಕು ಸಲ ಮತ್ತು 1519ರಲ್ಲಿ ಎರಡು ಸಲ ಭೂಮಿಯನ್ನು ದಾನ ನೀಡಿದ ವಿಷಯ ತಿಳಿಯುತ್ತದೆ. ಶ್ರೀ ಕಪ್ಪಿನ ಚೆನ್ನಬಸವ ಮಹಾಸ್ವಾಮಿಗಳು ತಮ್ಮ ತರುವಾಯ ತಮ್ಮ ಕರಕಮಲ ಸಂಜಾತರೂ, ಲಿಂಗಾನುರಾಗಿಗಳೂ, ವಾಕ್‌ಸಿದ್ಧಿ ಪುರುಷರೂ ಆಗಿದ್ದ ಪೂಜ್ಯಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರಿಗೆ ಶಾಲಿವಾಹನ ಶಕೆ 1442 (ಕ್ರಿ.ಶ.1420) ಮಠದ ಅಧಿಕಾರವನ್ನು ವಹಿಸುತ್ತಾರೆ. ಅವರು ಎಷ್ಟರಲ್ಲಿ ಲಿಂಗೈಕ್ಯರಾದರು ಎಂಬ ವಿಷಯ ಮಠದ ದಾಖಲೆಗಳಿಂದ ತಿಳಿದು ಬಂದಿಲ್ಲ. ಬಳ್ಳಾರಿಯ ರಾಜಾ ಹನುಮಪ್ಪ ನಾಯಕ ಮತ್ತು ಅವನ ಮಗ ಅಂಕುಶರಾಯ ನಾಯಕ ವಿಕ್ರಮ ಸಂವತ್ಸರ ಮಾಘ ಶುದ್ಧ 5 ರಂದು ಚರಪಟ್ಟವನ್ನು ಕಟ್ಟಿಸಿದ ಉಲ್ಲೇಖ ಬಳ್ಳಾರಿ ಮಠದ ದಾನಪತ್ರದಲ್ಲಿ ಉಲ್ಲೇಖವಿದೆ.



ಶರಣಯ್ಯ ಎಸ್.ಚರೇದ
(ಚರಂತಿಮಠ), ಹೊಸಪೇಟೆ

Scan For Digital Colourful
HAMPI TIMES E-paper

ಶ್ರೀಮಠದ ಎರಡನೇ ಪೀಠಾಧಿಕಾರಿಗಳಾದ ಶ್ರೀ ಸಿದ್ದೇಶ್ವರ ಸ್ವಾಮಿಗಳು(1520–1546) ರಾಜಮನ್ನಣೆಯೊಂದಿಗೆ ಈ ಭಾಗದಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಹೆಚ್ಚಿಸಿದ್ದಾರೆ. ಇವರ ಕಾಲಾವಧಿಯಲ್ಲಿ ಮೂಲಮಠಗಳ ಜೊತೆಗೆ ಶಾಖಾ ಮಠಗಳು ಅಭಿವೃದ್ಧಿಯನ್ನು ಹೊಂದುತ್ತವೆ. ರಾಜಾ ಹನುಮಪ್ಪ ನಾಯಕನು ಶ್ರೀ ಸಿದ್ದೇಶ್ವರ ಸ್ವಾಮಿಗಳಿಗೆ ಮಠದ ದಾಸೋಹ ಕಾರ್ಯಕ್ಕಾಗಿ ಕ್ರಿ.ಶ.1521ರಲ್ಲಿ ಹದಿಮೂರು ಸಲ ಬಳ್ಳಾರಿ ಸುತ್ತಮುತ್ತಲ ಶಾಖಾ ಮಠಗಳಿಗೆ ಅಲಕುಂದೆ, ಅಂದ್ರಹಾಳು, ಗೋನಾಳು, ಮುಂಡ್ರಿಗಿ, ಮಿಂಚೇರಿ, ಬೆಳಗಲ್ಲು, ಬೊಬ್ಬುಕುಂಟೆ, ಇಮ್ರಾಪುರ, ಕಪ್ಪಗಲ್ಲ ಮೊದಲಾದ ಗ್ರಾಮಗಳ ಭೂಮಿಯನ್ನು ದಾನವಾಗಿತ್ತಿದ್ದಾನೆ.

ಶ್ರೀ ಸಿದ್ಧೇಶ್ವರ ಸ್ವಾಮಿಗಳು ತಮ್ಮ ತರುವಾಯ ಶ್ರೀ ನಿರಂಜನ ಪ್ರಭು ಸ್ವಾಮಿಗಳಿಗೆ ನಿರಂಜನ ಚರಪಟ್ಟಾಧಿಕಾರವನ್ನು ಮಾಡುತ್ತಾರೆ. ಇವರು ಕ್ರಿ.ಶ. 1546 ರಿಂದ 1569ರವರೆಗೆ ಇಪ್ಪತ್ತಮೂರು ವರ್ಷಗಳ ಕಾಲ ಹಂಪಿಹೇಮಕೂಟ ಮಠದ ಪಿಠಾಧಿಪತಿಗಳಾಗಿ ಹೊಸಪೇಟೆ, ಬಳ್ಳಾರಿ, ಹಂಪಿ ಮತ್ತು ಎಲ್ಲ ಶಾಖಾಮಠಗಳಲ್ಲಿ ಧಾರ್ಮಿಕ ಕಾರ್ಯಕಲಾಪಗಳನ್ನು ಏರ್ಪಡಿಸುತ್ತ ಭಕ್ತೋದ್ಧಾರ ಮಾಡಿದ ನಿದರ್ಶನಗಳಿವೆ. ಇವರು ತಮ್ಮ ನಂತರ ಮಠದ ಧಾರ್ಮಿಕ ಸೇವೆ ಯತೇಚ್ಛೆಯಾಗಿ ಸಾಗಲು ಸಮರ್ಥರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳವರಿಗೆ ತಾವು ಬದುಕ್ಕಿದ್ದಾಗಲೇ ಕ್ರಿ.ಶ. 1569ರಲ್ಲಿ ಚರಪಟ್ಟಾಧಿಕಾರವನ್ನು ಮಾಡಿ, ಮಠದ ಸಂಪೂರ್ಣ ಅಧಿಕಾರವನ್ನು ಹಸ್ತಾಂತರಿಸುತ್ತಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು (ಕ್ರಿ.ಶ.1569–1588) ಅತ್ಯಂತ ಕ್ರಿಯಾಶೀಲ ಸ್ವಾಮಿಗಳಾಗಿದ್ದು, ನಿತ್ಯ ಸಂಚಾರ ಮೂರ್ತಿಗಳಾಗಿ ಮೂಲ ಮಠ ಮತ್ತು ಶಾಖಾ ಮಠಗಳನ್ನು ಪ್ರಸಿದ್ದಿಗೊಳಿಸಿದ್ದಾರೆ. ಇವರ ತರುವಾಯ ಮಠದ ಅಧಿಕಾರವನ್ನು ಹೊಂದಿದ ಶ್ರಿ ಪಂಚಾಕ್ಷರ ಸ್ವಾಮಿಗಳು (ಕ್ರಿ.ಶ.1588–1630) ಹಲವಾರು ಪಾಳೆಯಗಾರರ ದಾನದತ್ತಿಗಳ ರೂಪದಲ್ಲಿ ಬಂದ ಸಾವಿರಾರು ಎಕರೆ ಭೂಮಿಯನ್ನು, ಎಲ್ಲ ಮಠಗಳನ್ನು ಅತ್ಯಂತ ವ್ಯವಸ್ಥಿತವಾಗಿ ಮುನ್ನೆಡಿಸಿಕೊಂಡು ಬಂದು ಮಠಗಳಲ್ಲಿ ಶಿವಾನುಭವದಂಥ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತಾರೆ. ಇವರು ತಮ್ಮ ಶಿಷ್ಯರಾದ ಶ್ರೀ ಸಿದ್ಧರಾಮ ಸ್ವಾಮಿಗಳಿಗೆ (ಕ್ರಿ.ಶ.1630–1662) ಅಧಿಕಾರವನ್ನು ಅನುಗ್ರಹಿಸುತ್ತಾರೆ. ಶ್ರೀ ಸಿದ್ಧರಾಮ ಸ್ವಾಮಿಗಳು ಮಹಾತಪಸ್ವಿಗಳೂ, ಶಿವಾನುಭವ ಚರವರ್ಯರೂ ಆಗಿದ್ದರು. ತಮ್ಮ ಪ್ರಭಾವದಿಂದ ಮಠವನ್ನು ಉತ್ತರೋತ್ತರವಾಗಿ ಬೆಳೆಯುವಂತೆ ಮಾಡಿದ್ದಾರೆ. ಆನಂತರ ಅಧಿಕಾರವನ್ನು ಹೊಂದಿದ ಶ್ರೀ ಮರಿಮಹಾಂತ ಸ್ವಾಮಿಗಳು (ಕ್ರಿ.ಶ. 1662–1707) ಧರ್ಮ ಜಾಗೃತಿ ನಿಮಿತ್ಯ ದೇಶ ಪರ್ಯಟನೆ ಗೈದು, ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಕೀರ್ತಿಯು ನಾಡಿನೆಲ್ಲಡೆ ಬಹುವಾಗಿ ವಿಸ್ತರಿಸುವಂತೆ ಮಾಡಿದ್ದಾರೆ. ತದನಂತರ ಹಂಪಿಹೇಮಕೂಟ ಮಠದ ಪೀಠಾಧಿಕಾರವನ್ನು ಹೊಂದಿದ ಶ್ರೀ ಮರಿಕೊಟ್ಟೂರು ಸ್ವಾಮಿ(ಕ್ರಿ.ಶ.1707–1727)ಗಳಿಗೆ 1717ರಲ್ಲಿ ಬಳ್ಳಾರಿಯ ರಾಜರಾದ ಖಂಡೆಯ ಸಾಮಂತ ಪರದಳ ವಿಭಾಂಡ, ಹರಿರಾಯ ಮಾನಮರ್ದನ ಸದಾ ಶ್ರೀ ಸಿದ್ಧರಾಮೇಶ್ವರ ಪ್ರಸನ್ನರಾದ ಹಂಡೆ ಹಿರೇರಾಮಪ್ಪ ನಾಯಕರು ಹಿರಿಯರಿಗೆ ಸುಕೃತವಾಗಲೆಂದು ಪರಗಣಿ ಬಳ್ಳಾರಿ ವಿರಕ್ತಮಠದಲ್ಲಿ ದಾಸೋಹಧರ್ಮ ನಡೆಸುವುದಕ್ಕೆ, ಸಂಗನಕಲ್ಲು ಗ್ರಾಮಸಹಿತ, ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆ ಹೊಲಗಳನ್ನು ದಾನವಾಗಿ ನೀಡಿದ್ದಾರೆ. ಮತ್ತು 1725ರಲ್ಲಿ ಮಹಾರಾಜಾಧಿರಾಜ ಗುಡೇಕೋಟೆಯ ಹಿರೇಬೊಮ್ಮತ್ತ ರಾಜರು ಕುಡುತಿನಿ ವಿರಕ್ತಮಠಕ್ಕೆ ಹಲವಾರು ಹಳ್ಳಿಗಳ ಭೂಮಿಗಳನ್ನು ದಾನವಾಗಿ ಅರ್ಪಿಸಿದ್ದಾರೆ.

ತರುವಾಯ ಮಠದ ಪೀಠಾಧ್ಯಕ್ಷರಾದ ಶ್ರೀ ಮರಿ ತೋಂಟದಾರ್ಯ ಸ್ವಾಮಿಗಳು (ಕ್ರಿ.ಶ.1727–1734) ಮಠದ ಗುರುಪರಂಪರೆಯನ್ನು ಜಾಗೃತಿಯಿಂದ ಮುನ್ನೆಡಿಸಿದ ಯತಿವರ್ಯರು. ಅವರಿಗೆ ಶ್ರೀಮನ್ಮಹಾರಾಜಾಧಿರಾಜ ಖಂಡೆಯ ಯಶವಂತ, ಪರದಳ ವಿಭಾಡ, ಅರಿರಾಯ ಮಾನಮರ್ದನ ಖಂಡೆ ರಾಮಪ್ಪ ನಾಯಕರು ತಮ್ಮ ಹಿರಿಯರಿಗೆ ವಿಶೇಷ ಪುಣ್ಯ ಫಲ ಪ್ರಾಪ್ತಿಯಾಗಲೆಂದು ಹಲವಾರು ಭೂಮಿಯನ್ನು ನೀಡಿದ್ದಾರೆ. ತರುವಾಯ ಅಧಿಕಾರ ಹೊಂದಿದ ಶ್ರೀ ಮರಿಮಹಾಂತ ಸ್ವಾಮಿಗಳ(ಕ್ರಿ.ಶ.1734–1739)ನ್ನು ವಿದ್ಯಾನಗರದ ಆನೆಗುಂದಿ ಮಹಾರಾಜ ವೆಂಕಟಪತಿರಾಯರು ಬಹುಭಕ್ತಿಯಿಂದ ಕಂಡು ಅವರಿಗೆ ಕೃಷ್ಣಾಪೂರ ಮಾಗಣಿ, ಕಮಲಾಪುರ, ಆನೆಗುಂದಿ, ಸೊಂಡೂರು ಗಳಲ್ಲಿ ಗ್ರಾಮ–ಭೂಮಿಗಳನ್ನು ದಾನವಾಗಿ ನೀಡಿದ್ದಾರೆ. ತರುವಾಯ ಅಧಿಕಾರ ಸ್ವೀಕರಿಸಿದ ಶ್ರೀ ಮರಿ ಸ್ವಾಮಿಗಳು (1739–1746) ಹಿಂದಿನ ಹಿರಿಯ ಗುರುಗಳಿಂದ ಬಂದ ಸ್ಥಿರ–ಚರಾಸ್ತಿಗಳನ್ನು ಸಂರಕ್ಷಿಸಿಕೊಂಡು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಭಕ್ತಜನರಲ್ಲಿ ಆಧ್ಯಾತ್ಮಿಕ ಜಾಗೃತಿಯನ್ನು ಮೂಡಿಸುತ್ತಾರೆ. ಇವರ ತರುವಾಯ ಹಂಪಿಹೇಮಕೂಟ ಸಿಂಹಾಸನ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ ಅಧಿಕಾರವನ್ನು ಹೊಂದಿದ ಎಲ್ಲ ಸ್ವಾಮಿಗಳವರು ನಾಡಿನಾದ್ಯಂತ ಧಾರ್ಮಿಕ ಜಾಗೃತಿಯನ್ನೂ, ಶಿವಾನುಭವ ಕಾರ್ಯಕ್ರಮಗಳನ್ನೂ, ದಾಸೋಹವನ್ನು ನಿರಂತರವಾಗಿ ಜರುಗಿಸುತ್ತ ಶ್ರೀಮಠದ ಏಳ್ಗೆಗೆ ಶ್ರಮವಹಿಸಿದ್ದಾರೆ. ಕಾಲಕಾಲಕ್ಕೆ ಅನೇಕ ರಾಜರು ಭಕ್ತಿಯಿಂದ ಅರ್ಪಿಸಿದ ಭೂದಾನವನ್ನು ಹೊಂದಿ ಅಭಿವೃದ್ಧಿ ಕೆಲಸಗಳನ್ನು ಜರುಗಿಸಿದ್ದಾರೆ.

## ಶ್ರೀಮಠದ ಗುರು ಪರಂಪರೆ

| | | |
|---|---|---|
| 01. | ಪೂಜ್ಯಶ್ರೀಮನ್ ನಿರಂಜನ ಕಪ್ಪಿನ ಚೆನ್ನಬಸವ ಮಹಾಸ್ವಾಮಿಗಳು | ಕ್ರಿ.ಶ. 1517–1521 |
| 02. | ಪೂಜ್ಯಶ್ರೀಮನ್ ನಿರಂಜನ ಸಿದ್ಧೇಶ್ವರ ಮಹಾಸ್ವಾಮಿಗಳು | ಕ್ರಿ.ಶ. 1521–1546 |
| 03. | ಪೂಜ್ಯಶ್ರೀಮನ್ ನಿರಂಜನ ನಿರಂಜನಪ್ರಭು ಮಹಾಸ್ವಾಮಿಗಳು | ಕ್ರಿ.ಶ. 1546–1569 |
| 04. | ಪೂಜ್ಯಶ್ರೀಮನ್ ನಿರಂಜನ ಸಿದ್ಧಲಿಂಗ ಮಹಾಸ್ವಾಮಿಗಳು | ಕ್ರಿ.ಶ. 1569–1588 |
| 05. | ಪೂಜ್ಯಶ್ರೀಮನ್ ನಿರಂಜನ ಪಂಚಾಕ್ಷರಿ ಮಹಾಸ್ವಾಮಿಗಳು | ಕ್ರಿ.ಶ. 1588–1630 |
| 06. | ಪೂಜ್ಯಶ್ರೀಮನ್ ನಿರಂಜನ ಸಿದ್ಧರಾಮ ಮಹಾಸ್ವಾಮಿಗಳು | ಕ್ರಿ.ಶ. 1630–1662 |
| 07. | ಪೂಜ್ಯಶ್ರೀಮನ್ ನಿರಂಜನ ಮರಿಮಹಾಂತ ಮಹಾಸ್ವಾಮಿಗಳು | ಕ್ರಿ.ಶ. 1662–1707 |
| 08. | ಪೂಜ್ಯಶ್ರೀಮನ್ ನಿರಂಜನ ಮರಿಕೊಟ್ಟೂರು ಮಹಾಸ್ವಾಮಿಗಳು | ಕ್ರಿ.ಶ. 1707–1727 |
| 09. | ಪೂಜ್ಯಶ್ರೀಮನ್ ನಿರಂಜನ ಮರಿತೋಂಟದಾರ್ಯ ಮಹಾಸ್ವಾಮಿಗಳು | ಕ್ರಿ.ಶ. 1727–1734 |
| 10. | ಪೂಜ್ಯಶ್ರೀಮನ್ ನಿರಂಜನ ಮರಿಮಹಾಂತ ಮಹಾಸ್ವಾಮಿಗಳು | ಕ್ರಿ.ಶ. 1734–1739 |
| 11. | ಪೂಜ್ಯಶ್ರೀಮನ್ ನಿರಂಜನ ಮರಿಕೊಟ್ಟೂರು ಮಹಾಸ್ವಾಮಿಗಳು | ಕ್ರಿ.ಶ. 1739–1746 |
| 12. | ಪೂಜ್ಯಶ್ರೀಮನ್ ನಿರಂಜನ ಚೆನ್ನಬಸವ ದೇವರು ಸ್ವಾಮಿಗಳು | ಕ್ರಿ.ಶ. 1746–1773 |
| 13. | ಪೂಜ್ಯಶ್ರೀಮನ್ ನಿರಂಜನ ಮರಿಕೊಟ್ಟೂರು ಮಹಾಸ್ವಾಮಿಗಳು | ಕ್ರಿ.ಶ. 1773–1808 |
| 14. | ಪೂಜ್ಯಶ್ರೀಮನ್ ನಿರಂಜನ ಮರಿಮಹಾಂತ ಮಹಾಸ್ವಾಮಿಗಳು | ಕ್ರಿ.ಶ. 1808–1817 |
| 15. | ಪೂಜ್ಯಶ್ರೀಮನ್ ನಿರಂಜನ ಚೆನ್ನಬಸವೇಶ್ವರ ದೇವರು | ಕ್ರಿ.ಶ. 1817–1847 |
| 16. | ಪೂಜ್ಯಶ್ರೀಮನ್ ನಿರಂಜನ ಕೊಟ್ಟೂರು ಮಹಾಸ್ವಾಮಿಗಳು | ಕ್ರಿ.ಶ. 1847–1897 |
| 17. | ಪೂಜ್ಯಶ್ರೀಮನ್ ನಿರಂಜನ ಮರಿಕೊಟ್ಟೂರು ಮಹಾಸ್ವಾಮಿಗಳು | ಕ್ರಿ.ಶ. 1897–1932 |
| 18. | ಪೂಜ್ಯಶ್ರೀಮನ್ ನಿರಂಜನ ಕೊಟ್ಟೂರು ಮಹಾಸ್ವಾಮಿಗಳು (18ನೇ ಪೀಠಾಧಿಪತಿಗಳಾದ ಶ್ರೀ ಕೊಟ್ಟೂರು ಸ್ವಾಮಿಗಳು ಲಿಂಗೈಕ್ಯರಾಗಿ ಐದು ವರ್ಷಗಳ ಕಾಲ ಯಾವುದೇ ಪೀಠಾಧಿಪತಿಗಳು ಇರುವುದಿಲ್ಲ) | ಕ್ರಿ.ಶ. 1932–1968 |
| 19. | ಪೂಜ್ಯಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳು | ಕ್ರಿ.ಶ. 1972–2021 |
| **20.** | **ಪೂಜ್ಯಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು** | **24–03–2022 ರಿಂದ** |



ಪೂಜ್ಯಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು





ಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳು ಹೊಸಪೇಟೆಯಲ್ಲಿ ಆರಂಭಿಸಿದ ಈ ಸರ್ವಧರ್ಮ ಸಮನ್ವಯ ರಥೋತ್ಸವವು ವಿವಿಧ ಧರ್ಮಗಳ ನಡುವೆ ಸಹಾನುಭೂತಿ ಮತ್ತು ಬಾಂಧವ್ಯವನ್ನು ಬೆಳೆಸಿದೆ. ಭಾವೈಕ್ಯತೆ ಸಂದೇಶ ಸಾರುತ್ತಿದೆ.



**ಎಂ.ಎಸ್.ದಿವಾಕರ** ಐಎಎಸ್,
ಜಿಲ್ಲಾಧಿಕಾರಿ, ವಿಜಯನಗರ



ಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳು ದೂರದೃಷ್ಟಿಯೊಂದಿಗೆ ಹೊಸಪೇಟೆಯಲ್ಲಿ ಆರಂಭಿಸಿದ ಈ ಸರ್ವಧರ್ಮ ಸಮನ್ವಯ ರಥೋತ್ಸವವು ಸರ್ವಧರ್ಮ ಸಮನ್ವಯದ ಮೂಲಕ ಸಮಾಜದಲ್ಲಿ ಶಾಂತಿ ಮತ್ತು ಏಕತೆಯನ್ನು ಉತ್ತೇಜಿಸುತ್ತದೆ.

**ಬಿ.ಎಲ್.ಶ್ರೀಹರಿಬಾಬು** ಐಪಿಎಸ್,
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ವಿಜಯನಗರ

ಧರ್ಮದ ಕುರಿತು ಬಸವಣ್ಣ, ಪೈಗಂಬರರು, ದಾರ್ಶನಿಕರು ಸಾರಿದ ಧರ್ಮದ ತಿರುಳನ್ನು ಪ್ರತಿಯೊಬ್ಬರು ಅರಿಯಬೇಕು. ಶ್ರೀಜಗದ್ಗುರು ಸಂಗನಬಸವ ಮಹಾಸ್ವಾಮಿಗಳು ನಮಗೆ ಆಧ್ಯಾತ್ಮಿಕ ಕುರಿತು ಮಾರ್ಗದರ್ಶನ ಮಾಡಿದ್ದಾರೆ. ಸರ್ವಧರ್ಮ ಸಮನ್ವಯ ರಥೋತ್ಸವದ ಮೂಲಕ ಜಗಕ್ಕೆ ಶಾಂತಿ ಸಂದೇಶ ಸಾರಿದ್ದಾರೆ.



**ಲಾಲ್ ಹುಸೇನ್ ಕಂದಗಲ್** ಇಲಕಲ್ಲ



ಶ್ರೀಮಠದಿಂದ ನಡೆಯುತ್ತಿರುವ ಧಾರ್ಮಿಕ ಕಾರ್ಯಕ್ರಮಗಳು ಧರ್ಮಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತವೆ. ಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳ ಆಶಯದಂತೆ ಈಗಿನ ಜಗದ್ಗುರುಗಳಾದ ಶ್ರೀ ಬಸವಲಿಂಗ ಮಹಾಸ್ವಾಮಿಗಳು ಮುಂದುವರೆಸಿರುವುದು ಭಕ್ತರಲ್ಲಿ ಸಂತಸ ತಂದಿದೆ.

**ಸಾಲಿಸಿದ್ದಯ್ಯಸ್ವಾಮಿ** ಹಿರಿಯ ಮುಖಂಡರು
ವೀರಶೈವ ಲಿಂಗಾಯತ ಸಮಾಜ, ಹೊಸಪೇಟೆ

ಹೊಸಪೇಟೆಯಲ್ಲಿ ಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳು ಆರಂಭಿಸಿದ ಈ ಸರ್ವಧರ್ಮ ಸಮನ್ವಯ ರಥೋತ್ಸವ ಯುವ ಜನತೆಗೆ ಸಹಿಷ್ಣುತೆ ಮತ್ತು ಸಹಬಾಳ್ವೆಯ ಸಂದೇಶ ಸಾರುತ್ತದೆ.



**ಗೊಗ್ಗ ಚನ್ನಬಸವರಾಜ**
ಸಮಾಜ ಸೇವಕರು, ಗಣಿ ಮಾಲೀಕರು
ಹೊಸಪೇಟೆ



ಶ್ರೀಕೊಟ್ಟೂರು ಸಂಸ್ಥಾನ ಮಠದಿಂದ ನಡೆಯುವ ಸರ್ವಧರ್ಮ ಸಮನ್ವಯ ರಥೋತ್ಸವವು ಸಮಾಜದಲ್ಲಿ ಶಾಂತಿ ಏಕತೆಯನ್ನು ಬೆಳೆಸಲು ಸಹಕಾರಿ. ನಮ್ಮ ದೇಶದ ವೈವಿಧ್ಯಮಯ ಸಂಸ್ಕೃತಿಯನ್ನು ಬಿಂಬಿಸುತ್ತದೆ.

**ಕೆ.ತಿಪ್ಪೇಸ್ವಾಮಿ**
ಅಧ್ಯಕ್ಷರು, ಬಿ.ಡಿ.ಸಿ.ಸಿ. ಬ್ಯಾಂಕ್ ಹೊಸಪೇಟೆ

# ತ್ರಿವಿಧ ದಾಸೋಹ ಶ್ರೀ ಜ. ಕೊಟ್ಟೂರುಸ್ವಾಮಿ ಮಠ

ಅಡವಿಯಲ್ಲಿಯ ಆಶ್ರಮ ಬೇರೆ, ಊರಲ್ಲಿಯ ಮಠ ಬೇರೆ. ಒಂದರ ಗುರಿ ಆತ್ಮಕಲ್ಯಾಣ, ಇನ್ನೊಂದರ ಗುರಿ ಆತ್ಮಕಲ್ಯಾಣದೊಂದಿಗೆ ಸಮಾಜ ಕಲ್ಯಾಣ. ಹೀಗಾಗಿ ಮಠವೆನ್ನುವುದು ಧರ್ಮದೊಂದಿಗೆ ಸಮಾಜದ ಆರೋಗ್ಯಕ್ಕೆ ಅವಶ್ಯ ವಾಗಿರುವ ಶಿಕ್ಷಣ ಪ್ರಸಾರ, ಸಾಹಿತ್ಯ ಸೃಷ್ಟಿ, ನ್ಯಾಯ ಪರಿಪಾಲನೆ, ಔಷಧೋಪಚಾರ, ವೃತ್ತಿ ಶಿಕ್ಷಣ, ಕಲಾಪೋಷಣೆ, ಸಂಸ್ಕೃತಿ ಸಂವರ್ಧನೆ ಇತ್ಯಾದಿ ಚಟುವಟಿಕೆಗಳಿಗೆ ಚ್ಯುತಿ ಬಾರದಂತೆ ನೋಡಿ ಕೊಳ್ಳುವ ಒಂದು ಸಾಮಾಜಿಕ ಸಂಸ್ಥೆ. ಆಂಗ್ಲ ಆಡಳಿತ ಪದ್ಧತಿ ಕಾರಣವಾಗಿ ಇತ್ತೀಚಿನ ದಿನಗಳಲ್ಲಿ ನ್ಯಾಯ, ಶಿಕ್ಷಣ, ಔಷಧೋಪಚಾರ ಇತ್ಯಾದಿ ಚಟುವಟಿಕೆಗಳನ್ನು ಒಂದೊಂದಾಗಿ ಸರ್ಕಾರವಹಿಸಿಕೊಂಡ ಕಾರಣ ಮಠ ಧಾರ್ಮಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಯಿತು. ಹೀಗಿದ್ದು ಜಂಗಮ ದಾಸೋಹ ತತ್ವದ ಲಿಂಗಾಯಿತ ಮಠಗಳು ಧಾರ್ಮಿಕತೆಯೊಂದಿಗೆ ಸಮಾಜ ಕಲ್ಯಾಣದ ಭಾಗವಾಗಿರುವ ಪ್ರಸಾದನಿಲಯ, ಶಿಕ್ಷಣಸಂಸ್ಥೆ, ಸಾಹಿತ್ಯಪ್ರಕಾಶನ ಮೊದಲಾದ ಚಟುವಟಿಕೆಗಳನ್ನು ಮುನ್ನಡೆಸುತ್ತಾ ಬಂದದ್ದು ಮಠ ತತ್ವವನ್ನು ಒಂದು ಮಿತಿಯಲ್ಲಾದರೂ ಪಾಲಿಸುತ್ತಲಿರುವುದರ ದ್ಯೋತಕವೆನಿಸಿದೆ'. ಎಂದು ಡಾ.ಎಂ.ಎಂ. ಕಲಬುರ್ಗಿಯವರ ಮಾತಾಗಿದೆ. ಇಂತಹ ಸಮಾಜಮುಖಿ ಕಾರ್ಯಗಳನ್ನು ಮಾಡುವ ಯಾವುದೇ ಮಠಕ್ಕೆ ಅನ್ವಯಿಸುವಂತಹ ಮಾತುಗಳಾಗಿವೆ. ಹೊಸ ಪೇಟೆಯ ಶ್ರೀ ಜಗದ್ಗುರು ಕೊಟ್ಟೂರು ಸಂಸ್ಥಾನಮಠವು ಮೇಲಿನ ಮಾತುಗಳಿಗೆ ನಿದರ್ಶನವಾಗಿದೆ. 15ನೇ ಶತಮಾನದಿಂದ ಬೆಳೆದು ಬಂದ ಐತಿಹಾಸಿಕತೆ ಈ ಸಂಸ್ಥಾನ ಮಠಕ್ಕೆ ಇದೆ.

ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಪೀಠವ ಇಲ್ಲಿಯವರೆಗೆ ಈ ಪೀಠಕ್ಕೆ 20 ಜನ ಪೀಠಾಧಿಕಾರಿಗಳು ಅಧಿಕಾರವನ್ನು ವಹಿಸಿಕೊಂಡು ಈ ಪೀಠ ಪರಂಪರೆಯನ್ನು ಸರ್ವಾಂಗೀಣವಾಗಿ ಬೆಳೆಸಲು ಸಾರ್ವಜನಿಕರಿಂದ ಮತ್ತು ಅನೇಕ ರಾಜರುಗಳಿಂದ ದಾನದತ್ತಿಗಳನ್ನು ಪಡೆದ ಚರಿತ್ರೆ ಇದೆ. ಕ್ರಿಸ್ತಶಕ 1420 ರಿಂದ ಶ್ರೀ ಕಪ್ಪಿನ ಚನ್ನಬಸವ ಮಹಾಸ್ವಾಮಿಗಳು ಆದಿಯಾಗಿ ಇಪ್ಪತ್ತನೇ ಪೀಠಾಧಿಪತಿಗಳಾದ ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮಿಗಳವರೆಗೆ ಶ್ರೀಮಠವು ಅನೇಕ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿದೆ. ಅನೇಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಈ ಭಾಗದ ಬಡ–ದೀನ–ದಲಿತ ಮಕ್ಕಳಿಗೆ ಅಕ್ಷರ ದಾಸೋಹವನ್ನು ಮಾಡಿದೆ. ಜೊತೆಗೆ ಮಹಾಕವಿ ಹರಿಹರ ಸಂಶೋಧನಾ ಕೇಂದ್ರವನ್ನು ತೆಗೆದು ನಾಡಿನ ವಿದ್ವಾಂಸರಿಂದ ಕೃತಿಗಳನ್ನು ಪ್ರಕಟಿಸುವ ಮಹತ್ತರವಾದ ಯೋಜನೆಯನ್ನು ಬಹು ಹಿಂದೆಯೇ ಶ್ರೀಮಠ ಹಾಕಿಕೊಂಡು ಬಂದಿದೆ. ಶ್ರೀಮಠದಿಂದ ಪ್ರಕಟವಾಗುವ ಹೇಮಕೂಟ ಪತ್ರಿಕೆ ಇತಿಹಾಸಕಾರರ ಆಸಕ್ತಿಗೆ ಕಾರಣವಾಗಿದೆ. ಪ್ರತಿ ತಿಂಗಳು ಶಿವಾನುಭವ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಸಾಮಾಜಿಕವಾಗಿ ಕೆಲಸ ಮಾಡಿದ ಪುಣ್ಯ ಪುರುಷರ ಚರಿತ್ರೆ, ಬಸವಾದಿ ಪ್ರಮಥರ ತತ್ವ ಪ್ರಸಾರ ಹಾಗೂ ಮಹಿಳಾ ಸಬಲೀಕರಣದ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಶ್ರೀ ಮಠವು ನಡೆಸಿಕೊಂಡು ಬರುತ್ತಿದೆ.


ಇಂತಹ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠ ಪ್ರತಿವರ್ಷ ಶ್ರೀ ಜಗದ್ಗುರು ಕೊಟ್ಟೂರೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಸರ್ವಧರ್ಮ ಸಮನ್ವಯಮಹಾರಥೋತ್ಸವವನ್ನುಆಚರಿಸುವಸತ್ಪರಂಪರೆಯನ್ನು



ಬೆಳೆಸಿಕೊಂಡು ಬಂದಿದೆ. ನಮ್ಮಲ್ಲಿ ಅನೇಕ ಮತಗಳಿವೆ. ಜೈನ, ವೀರಶೈವ–ಲಿಂಗಾಯತ, ವೈಷ್ಣವ ಶ್ರೀವೈಷ್ಣವ, ಕ್ರೈಸ್ತ, ಇಸ್ಲಾಂ ಮುಂತಾದ ಎಲ್ಲ ಧರ್ಮಿಯರು ಅವರವರ ಧಾರ್ಮಿಕ ಆಚರಣೆಗಾಗಿ ಮತಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಎಲ್ಲ ಮತಗಳ ಸಂಕಲ್ಪ ಶಕ್ತಿ ಎಂದರೆ ಧರ್ಮಮಾರ್ಗದಲ್ಲಿ ನಡೆಯುವುದು. ಹೀಗಾಗಿ ಅನೇಕ ಮತಗಳಿದ್ದರೂ ಅವುಗಳ ಧಾರ್ಮಿಕ ಆಚರಣೆ, ನಂಬಿಕೆ ಮತ್ತು ಸಂದೇಶಗಳು ಎಲ್ಲಾ ಜನವರ್ಗದ ಹಿತವನ್ನು ಕಾಪಾಡುವ ವಿಶ್ವಮಾನ್ಯ ಸಂದೇಶಗಳನ್ನು ಒಳಗೊಂಡಿರುತ್ತವೆ. ಸತ್ಯ, ಅಹಿಂಸೆ, ಪರೋಪಕಾರ, ವರ್ಗ–ವರ್ಣ–ಲಿಂಗ ಭೇದ ಇಲ್ಲದೆ ಎಲ್ಲರೂ ಸಮಾನವಾಗಿ ಸೌಹಾರ್ದ ಬದುಕನ್ನು ಬಾಳಬೇಕು ಎಂಬುದು ಧರ್ಮದ ತಿರುಳು. ಇಂತಹ ತಿರುಳನ್ನು ಅಳವಡಿಸಿಕೊಂಡು ಎಲ್ಲ ಮತಗಳು ಅಸ್ತಿತ್ವದಲ್ಲಿ ಇವೆ. ಆಯಾ ಮತಗಳ ಧಾರ್ಮಿಕ ಗ್ರಂಥಗಳನ್ನು ನಾವು ಬೇರೆ ಬೇರೆ ಹೆಸರಿನಿಂದ ಕರೆದರೂ ಆ ಗ್ರಂಥಗಳ ತಾತ್ವಿಕ ನಿಲುವು ಧರ್ಮ ಪರವಾದ ನಡೆ ನುಡಿ ಆಗಿರುವುದನ್ನು ಮರೆಯುವಂತಿಲ್ಲ. ಈ ಹೊತ್ತು ಜಾತಿ, ಉಪಜಾತಿ, ಮತ–ಪಂಥಗಳ ಹೆಸರಿನಲ್ಲಿ ಸಮಾಜ ಹಂಚಿ ಹೋಗಿರುವುದನ್ನು ಕಾಣುತ್ತೇವೆ. ಇಂತಹ ಸಂದರ್ಭದಲ್ಲಿ ಸರ್ವ ಮತಗಳ ಸಮಾವೇಶ ವನ್ನು ಒಂದು ವೇದಿಕೆಯಲ್ಲಿ ತರುವ ಮಹಾ ಸಂಕಲ್ಪವನ್ನು ಮಾಡಿದವರು ಪರಮಪೂಜ್ಯ ಲಿಂಗೈಕ್ಯ ಜಗದ್ಗುರು ಸಂಗನ ಮಹಾಸ್ವಾಮಿಗಳವರು. ಅವರ ಈ ಸಂಕಲ್ಪದ ಆಚರಣೆಗೆ ಎಂಟು ವರ್ಷ ತುಂಬಿದೆ. 2025 ಮಾರ್ಚ್ 8,9 ಮತ್ತು 10ರಂದು ನಡೆಯುವ ಸರ್ವಧರ್ಮ ಸಮನ್ವಯ ಮಹಾ ರಥೋತ್ಸವದ ಅಂಗವಾಗಿ ಶ್ರೀಮಠದಲ್ಲಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ, ಅದರ ಮಂಗಲೋತ್ಸವ ಮತ್ತು ಪರಮಪೂಜ್ಯ ಜಗದ್ಗುರು ಲಿಂಗೈಕ್ಯ ಡಾ. ಸಂಗನಬಸವ ಮಹಾಸ್ವಾಮಿಗಳ ತೃತೀಯ ಪುಣ್ಯ ಸ್ಮರಣೋತ್ಸವ, ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮಗಳನ್ನು ಆಯೋಜಿ ಸಲಾಗಿದೆ.

ಸರ್ವಧರ್ಮ ಸಮನ್ವಯ ಮಹಾರಥೋತ್ಸವದಲ್ಲಿ ಬೈಲುವದ್ದಿಗೇರಿ ಗ್ರಾಮದ ಸಕಲ ಭಕ್ತಾದಿಗಳು ಸಕಲವಾದ್ಯಗಳ ಮೂಲಕ ತೇರಿನ ಹಗ್ಗವನ್ನು ತರುವುದು, ಈ ಸಂದರ್ಭದಲ್ಲಿ ಸರ್ವಧರ್ಮಗಳ ಮುಖಂಡರುಗಳ, ತಾಯಂದಿರು, ಯುವಕರು ತಮ್ಮ ತಮ್ಮ ಧರ್ಮ ಗ್ರಂಥಗಳನ್ನು ಅತ್ಯಂತ ಸಂಭ್ರಮದಿಂದ ತಂದು ರಥದಲ್ಲಿ ಪ್ರತಿ ಷ್ಠಾಪಿಸುವುದು, ಸಕಲ ವಾದ್ಯ ವೈಭವಗಳೊಂದಿಗೆಮಹಾರಥೋತ್ಸವಕ್ಕೆಚಾಲನೆನೀಡಲಾಗುವುದು.

ಸರ್ವಧರ್ಮ ಸಮನ್ವಯ ಕೇಂದ್ರವಾದ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ಪೂಜ್ಯರಾದ ಹೇಮಕೂಟ ಸಿಂಹಾಸನಾ ಧೀಶ್ವರ ಲಿಂಗೈಕ್ಯ ಸಂಗನಬಸವ ಮಹಾಸ್ವಾಮಿಗಳ ಸಾಮಾಜಿಕ ಸಾಮರಸ್ಯದ ದ್ಯೋತಕವಾಗಿ ನಡೆಯುವ ಸರ್ವಧರ್ಮ ಸಮನ್ವಯ ಮಹಾರಥೋತ್ಸವದಂತೆ ಶ್ರೀ ಮಠದ ಎಲ್ಲ ಕಾರ್ಯಕ್ರಮಗಳು ಎಲ್ಲ ಜನಾಂಗದ ಒಳಗೊಳ್ಳುವಿಕೆಯಿಂದ ನಡೆದು, ಸರ್ವಧರ್ಮ ಸಮ ನ್ವಯ ಕೇಂದ್ರವಾಗಿ ಶ್ರೀ ಮಠವು ಈಗಿನ ಪೂಜ್ಯರಾದ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಸ್ವಾಮಿಗಳ ನೇತೃತ್ವದಲ್ಲಿ ಪರಂಪರೆಯಾಗಿ ನಡೆದುಕೊಂಡು ಬರುತ್ತಲಿದೆ.





ಡಾ. ಕೆ. ರವೀಂದ್ರನಾಥ
ಹಿರಿಯ ಸಂಶೋಧಕರು,
ಹೊಸಪೇಟೆ



ಬಿ. ಸತೀಶ್‌ಗೌಡ
ಸಂಶೋಧನಾರ್ಥಿ
ಕವಿಹಂ









ಹೊಸಪೇಟೆಯ ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನಮಠದಲ್ಲಿ ಪೂಜ್ಯಶ್ರೀ ವೀರಬಸವ ದೇವರು ಪ್ರವಚನ ನೀಡಿದರು.







**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.








Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಸರ್ವಧರ್ಮಗಳ ಸಮನ್ವಯತೆ

## ವಿಜಯನಗರದ ಅರಸ ಪ್ರೌಢದೇವರಾಯರಿಂದ ಕೊಟ್ಟೂರುಸ್ವಾಮಿ ಮಠದವರೆಗೆ



ವಿಜಯನಗರ ಸಾಮ್ರಾಜದ ಪ್ರೌಢದೇವರಾಯ ಅರಸನ ಕಾಲದಲ್ಲಿ ಸಮಾಜೋ ಧಾರ್ಮಿಕ ಸಾಹಿತ್ಯಿಕ ಹಾಗೂ ಸರ್ವಧರ್ಮ ಸಮಾನ ದೃಷ್ಟಿ ಮತ್ತು ಸೌಹಾರ್ದತೆಯಿಂದ ಕೂಡಿ ಬಾಳುವ ವಾತಾವರಣವಿತ್ತು. ಶೈವ, ವೈಷ್ಣವ, ಇತರರು, ಜೈನ ಮತ್ತು ಮುಸ್ಲಿಮರು ಈ ನೆಲದಲ್ಲಿದ್ದವರು. ಶೈವ, ವೀರಶೈವ, ವೈಷ್ಣವ ದೇವಾಲಯಗಳ ಜೊತೆಗೆ ಜಿನಾಲಯಗಳು, ಮಸೀದಿಗಳು ನಿರ್ಮಾಣಗೊಂಡಿದ್ದವು. ಹಂಪಿ ಬಹುಧರ್ಮಿಯ ಸಾಂಸ್ಕೃತಿಕ ಕೇಂದ್ರವಾಗಿತ್ತು. ಜಾತಿ ಮತಗಳ ಕಲ್ಪನೆ ಇಲ್ಲದ ನೂರೊಂದು ವಿರಕ್ತರು, ಹಂಪಿಯಲ್ಲಿ ನೆಲೆ ನಿಂತಿದ್ದರು. 12ನೇ ಶತಮಾನದ ಕಲ್ಯಾಣದ ಕ್ರಾಂತಿಯ ನಂತರ ಅಳಿದುಳಿದ ವಚನ ಸಾಹಿತ್ಯವನ್ನು ಸಂರಕ್ಷಿಸುವ ಸಂಬಂಧ ನೂರೊಂದು ವಿರಕ್ತರು ಹಂಪಿಗೆ ಬಂದರು. ಹಂಪಿಯಲ್ಲಿ ವಚನ ಸಾಹಿತ್ಯದ ಸಂರಕ್ಷಣೆ, ಸಂಗ್ರಹ, ವ್ಯಾಖ್ಯಾನ ಟೀಕುಗಳ ಕಾರ್ಯ ನಡೆಯಿತು. ವಿರಕ್ತರುಗಳು ಗವಿಗಳಲ್ಲಿ, ಮಠಗಳಲ್ಲಿ ಕುಳಿತು ವಚನ ಸಾಹಿತ್ಯದ ಕಾರ್ಯವನ್ನು ಮಾಡಿದ್ದವರು. ಈ ಮಠಗಳಲ್ಲಿ ಕೊಟ್ಟೂರು ಸ್ವಾಮಿ ಮಠವು ಪ್ರಮುಖವಾದದ್ದೇ ಆಗಿತ್ತು. ಪ್ರೌಢ ದೇವರಾಯನ ಕಾಲಘಟ್ಟದಿಂದಲೆ ಹಂಪಿಯಲ್ಲಿ ಕೊಟ್ಟೂರು ಸ್ವಾಮಿ ಮಠವು, (ಈಗ ಹೊಸಪೇಟೆಯಲ್ಲಿ) ಧಾರ್ಮಿಕ, ಸಮಾಜೋ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿ ಇಂದಿಗೂ ತನ್ನ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದೆ. ಹೊಸಪೇಟೆಯ ಕೊಟ್ಟೂರು ಸ್ವಾಮಿ ಮಠದಲ್ಲಿ ಇದೇ ಮಾರ್ಚ್ 10 ರಂದು ಸರ್ವಧರ್ಮ ಸಮನ್ವತೆಯ ರಥೋತ್ಸವ ನಡೆಯಲಿದೆ.

ಕನ್ನಡ ನಾಡಿನ ಸಮಾಜೋ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಚರಿತ್ರೆಯಲ್ಲಿ ಮಠಮಾನ್ಯಗಳಿಗೆ ಮಹತ್ತರ ಸ್ಥಾನವಿದೆ. ಇದೇ ರೀತಿ ಹಂಪಿಯ ಪರಿಸರದಲ್ಲಿಯೂ ಹಲವಾರು ಮಠಗಳು ಇಂತಹ ಕಾರ್ಯಗಳನ್ನು ನಿರ್ವಹಿಸಿವೆ. ವಿಶೇಷವಾಗಿ ಹಂಪಿಯಲ್ಲಿ ಹಂಪಿಯ ಕೊಟ್ಟೂರುಸ್ವಾಮಿ ಮಠವು ಪ್ರಮುಖವಾದುದ್ದಾಗಿದೆ. ಈ ಮಠವು ಹಂಪಿಯ ವಿರೂಪಾಕ್ಷ ಗುಡಿಯ ಎಡ ಭಾಗದಲ್ಲಿ ಹಾಗೂ ತುಂಗಭದ್ರ ನದಿಯ ದಂಡೆಯ ಮೇಲೆ ಉತ್ತರಭಿಮುಖವಾಗಿ ಇದೆ. 1521 ರಲ್ಲಿ ತೋಂಟದ ಸಿದ್ದಲಿಂಗ ಯತಿಗಳು ಹಂಪಿಗೆ ಬಂದಾಗ ಈ ಮಠದಲ್ಲಿ ಇದ್ದು ಅನುಷ್ಠಾನ ಮಾಡಿದ್ದರು ಎನ್ನುವ ಐತಿಹ್ಯವಿದೆ. ಕ್ರಿ.ಶ.1518 ರಿಂದ ಈ ಮಠದ ಗುರು ಪರಂಪರೆ ಪ್ರಾರಂಭಗೊಂಡು ಇವತ್ತಿನವರೆಗೂ ಇದು ನಡೆದುಕೊಂಡು ಬಂದಿದೆ.

ಈವರೆಗೆ ಸುಮಾರು 21 ಗುರು ಪರಂಪರೆಯ ಸ್ವಾಮೀಜಿಗಳು ಈ ಮಠದ ಪೀಠವನ್ನು ಅಲಂಕರಿಸಿದ್ದಾರೆ. ಹಂಪಿ ಅಲ್ಲದೆ ಹೊಸಪೇಟೆ ಹಾಗೂ ಇತರೆ ಸ್ಥಳಗಳಲ್ಲಿ ಶಾಖಾಮಠಗಳಿದ್ದು, ಹಂಪಿಯ ಮಠದ ಪರಂಪರೆ ಯನ್ನು ಮುಂದುವರಿಸಿಕೊಂಡು ಬರಲಾಗಿದೆ. 1972 ರಿಂದ ಪರಮ ಪೂಜ್ಯ ಸಂಗನ ಬಸವ ಮಹಾಸ್ವಾಮೀಜಿಗಳು ಮಠದ ಪರಂಪರೆಯನ್ನು ಅತ್ಯಂತ ಸಮರ್ಪಕವಾಗಿ ಸರ್ವಧರ್ಮ ಸಮಾನ ದೃಷ್ಟಿ ಮತ್ತು ಧಾರ್ಮಿಕ ಸೌಹಾರ್ದತೆಯಿಂದ ನಿರ್ವಹಿಸಿದ್ದರು. ಇದೀಗ ಪರಮ ಪೂಜ್ಯಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಸಹ ಸರ್ವಧರ್ಮ ಸಮಾನ ದೃಷ್ಟಿ, ಸಾಮಾಜಿಕ, ಸಾಹಿತ್ಯಿಕ, ಸಂಸ್ಕೃತಿಕ ಮೊದಲಾದ ಕಾರ್ಯಗಳನ್ನು ಸಮರ್ಥವಾಗಿ ಮುನ್ನೆಡೆಸುತ್ತಿದ್ದಾರೆ.




ಎಂ.ಎಂ.ಶಿವಪ್ರಕಾಶ


ಲೇಖಕರು: ಹೊಸಪೇಟೆ

ಮೊ: 9449654489


Scan For Digital Colourful

HAMPI TIMES E-paper

ಕನ್ನಡ ಸಾಹಿತ್ಯ, ಸಂಸ್ಕೃತಿ ಸಂವರ್ಧನೆಗೆ ಮತ್ತು ಸಾಮರಸ್ಯಕ್ಕೆ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯ ಅರಸ ಮಾಡಿದ ಕಾರ್ಯಗಳು ಅನನ್ಯವಾದದ್ದುವುಗಳು. ಪ್ರೌಢದೇವರಾಯನು ಕ್ರಿ.ಶ. 1424 ರಿಂದ 1446 ರವರೆಗೆ ಸುಮಾರು 22 ವರ್ಷಗಳ ಕಾಲ ಸಾಮ್ರಾಜ್ಯವನ್ನು ಸಮರ್ಥವಾಗಿ ಆಳಿದವನು. ಹಂಪಿಯ ಸಾಮ್ರಾಜ್ಯಕ್ಕೆ ಅಡಿಪಾಯವನ್ನು ಹಾಕಿಕೊಟ್ಟ ಸಂಗಮ ವಂಶದ ಅರಸರುಗಳಲ್ಲಿ ಇವನು ಸಹ ಪ್ರಮುಖನಾದವನು. ವಿಜಯನಗರದ ಚರಿತ್ರೆಯಲ್ಲಿ ಪ್ರೌಢದೇವರಾಯನ ವಿಶೇಷವಾಗಿ ಗುರುತಿಸಲ್ಪಟ್ಟಿರುವನು. ಕವಿಗಳಿಗೆ, ಪಂಡಿತರಿಗೆ, ಕಲಾವಿದರಿಗೆ ರಾಜಾಶ್ರಯವನ್ನು ನೀಡಿದ್ದವನು. ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕವಾಗಿ ವಿಶೇಷವಾಗಿ ಕೋಮು ಸೌಹಾರ್ದದಿಂದ ಆಡಳಿತವನ್ನು ನಿರ್ವಹಿಸಿದ್ದು, ಸೈನ್ಯದಲ್ಲಿ ಮುಸ್ಲಿಮರಿಗೂ ಅವಕಾಶ ಕಲ್ಪಿಸಿದ್ದ. ಸೈನ್ಯದಲ್ಲಿ ದಂಡನಾಯಕ ಹುದ್ದೆಗೆ ಹಾಗೂ ರಾಯಭಾರಿಯನ್ನಾಗಿ ಮುಸ್ಲಿಮರನ್ನು ನೇಮಿಸಿಕೊಂಡಿದ್ದ. ಇಷ್ಟೇ ಅಲ್ಲ ತನ್ನ ಸಿಂಹಾಸನದ ಪಕ್ಕದಲ್ಲಿ ಕುರಾನಿನ ಪ್ರತಿಯನ್ನು ಇಟ್ಟುಕೊಂಡಿದ್ದ ಎಂಬುದನ್ನು ಗಮನಿಸಿದಾಗ ಪ್ರೌಢದೇವರಾಯ ಸಾಮರಸ್ಯಕ್ಕೆ ಇಂದಿಗೂ ಮಾದರಿಯಾದ ಅರಸನಾಗಿ ಕಾಣಿಸುತ್ತಾನೆ. ವಿಜಯನಗರದ ಸೈನ್ಯದಲ್ಲಿ ಮೊದಲ ಬಾರಿಗೆ ಅಶ್ವದಳಕ್ಕೆ ಪ್ರಮುಖನನ್ನಾಗಿ ಮುಸ್ಲಿಂ ಯೋಧನನ್ನು ನೇಮಿಸಲಾಗಿತ್ತು ಎಂದು ತಿಳಿದು ಬರುತ್ತದೆ. ಇದಕ್ಕೆ ಉದಾಹರಣೆ ಕಟಗಿ ಅಹಮದ್ ಖಾನ್ ಪ್ರಮುಖನಾದವನು. ಪ್ರೌಢದೇವರಾಯನ ಸೈನ್ಯದ ದಂಡನಾಯಕ ರಲ್ಲಿ ಇವನು ಎಷ್ಟು ಪ್ರಮುಖನಾಗಿದ್ದನೆಂದರೆ ದಾನದತ್ತಿಗಳನ್ನು ಇವನು ಬಿಟ್ಟಿದ್ದಾನೆ. ಶಾಸನಗಳನ್ನು ಹಾಕಿಸುವಷ್ಟರ ಮಟ್ಟಿಗೆ ಸೈನ್ಯದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದ ಎನ್ನುವುದು ತಿಳಿದು ಬರುತ್ತದೆ. ಸೈನ್ಯಕ್ಕೆ ಅತ್ಯಂತ ನಿಷ್ಠಾವಂತ ದಂಡನಾಯಕ ಆಗಿದ್ದವನು. ಅವನು ಪ್ರೌಢದೇವರಾಯನಿಗೆ ಒಳಿತಾಗಲಿ ಎಂದು ಧರ್ಮಶಾಲೆಯನ್ನು ಕಟ್ಟಿಸುತ್ತಾನೆ. ಅವನು ಕಟ್ಟಿಸಿದ ಧರ್ಮ ಶಾಲೆ ಮತ್ತು ಬಾವಿಯನ್ನು ಇಂದಿಗೂ ಹಂಪಿಯಲ್ಲಿ ನೋಡಬಹುದಾಗಿದೆ. ಧರ್ಮಶಾಲೆಯ ತೊಲೆಯ ಶಾಸನದಲ್ಲಿ "ಹಮದುಖಾನನು ರಾಯರಿಗೆ ಧರ್ಮವಾಗಬೇಕಂದು ಕಟಿಸಿದ ಧರ್ಮಸಾಲೆಬಾವಿಯನು ಆಚಂದ್ರಾರ್ಕಸ್ತಾ" ಎಂದಿದೆ.



ಪ್ರೌಢದೇವರಾಯನಿಗೆ ಒಳಿತಾಗಲಿ ಎಂದು ಹಂಪಿಯಲ್ಲಿ ಕಟ್ಟಿಗಿ ಅಹಮ್ಮದ ಖಾನ್ ಕಟ್ಟಿಸಿದ ಧರ್ಮಸಾಲೆ



ವಿದೇಶಿ ಪ್ರವಾಸಿಗ ಅಬ್ದುಲ್ ರಜಾಕ್ ಬೀಜನಗರದಲ್ಲಿ ನೆಲೆಸಿದ್ದ ಕ್ವಾಜಾ ಮಸೂದ್ ಮತ್ತು ಕ್ವಾಜಾ ಮಹಮದ್ ಎಂಬ ಕುರಾನ್ ದೇಶದವರನ್ನು ರಾಜನು ತನ್ನ ರಾಯಭಾರಿಗಳನ್ನಾಗಿ ನೇಮಿಸಿ ಅನೇಕ ಬಹುಮಾನದ ವಸ್ತುಗಳನ್ನು ಅವರಿಗೆ ನೀಡಿದ್ದಾನೆ. ಮುಸ್ಲಿಮರಿಗೆ ಸೈನ್ಯದಲ್ಲಿ ಸೈನಿಕರಾಗಿ ಸೇನೆಯ ದಂಡನಾಯಕ ಹುದ್ದೆಗಳಲ್ಲದೆ ರಾಯಭಾರಿಗಳನ್ನಾಗಿ ಪ್ರೌಢದೇವರಾಯ ನೇಮಿಸಿಕೊಂಡಿದ್ದನ್ನು ದಾಖಲಿಸಿದ್ದಾನೆ. ಅಲ್ಲದೇ ಪ್ರೌಢದೇವರಾಯ ತನ್ನ ಸಿಂಹಾಸನದ ಪಕ್ಕದಲ್ಲಿ ಕುರಾನಿನ ಪ್ರತಿಯನ್ನು ಇಟ್ಟುಕೊಂಡಿದ್ದ ಎಂಬುದನ್ನು ಇವನು ದಾಖಲಿಸಿದ್ದಾನೆ. ಈ ಎಲ್ಲಾ ಅಂಶಗಳನ್ನು ಚರಿತ್ರೆಯ ದಾಖಲೆಗಳಿಂದ ಪರಿಶೀಲಿಸಿದಾಗ ಪ್ರೌಢದೇವರಾಯ ಅತ್ಯಂತ ಸಮರ್ಥ ಮತ್ತು ಸರ್ವಧರ್ಮ ಸಮಾನ ದೃಷ್ಟಿ ಮತ್ತು ಧಾರ್ಮಿಕ ಸೌಹಾರ್ದತೆಯ ಹರಿಕಾರನಾಗಿದ್ದ ಎನ್ನುವುದು ತಿಳಿದು ಬರುತ್ತದೆ. ಇದೇ ಪರಂಪರೆಯು ಹೊಸಪೇಟೆ ಕೊಟ್ಟೂರು ಸ್ವಾಮಿ ಮಠದಲ್ಲಿಯೂ ಈಗಲೂ ಮುಂದುವರೆದುಕೊಂಡು ಬಂದಿದೆ.

### ಬಸವ ಪುರಾಣಕ್ಕೆ ಹೊಸ ಆಯಾಮ

ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲದಿಂದಲೂ ಕೊಟ್ಟೂರು ಸ್ವಾಮಿ ಮಠವು ತನ್ನದೇ ಆದ ಪರಂಪರೆಯನ್ನು ಹೊಂದಿದೆ. ನಮ್ಮ ಕಾಲಘಟ್ಟದಲ್ಲಿ ಪರಮಪೂಜ್ಯ ಶ್ರೀ ಸಂಗನಬಸವ ಮಹಾಸ್ವಾಮಿಗಳು ಮಠದ ಪರಂಪರೆಯಲ್ಲಿ ಹೊಸ ಚರಿತ್ರೆಯನ್ನು ಸೃಷ್ಟಿಸಿದವರು. ಸಮಾಜದ ಸ್ವಾಸ್ಥ್ಯದ ಬಗ್ಗೆ ಅಪಾರ ಚಿಂತನೆ, ಬಡವರು, ದೀನ ದಲಿತರ ಬಗೆಗಿರುವ ಕಾಳಜಿ. ಶಿಕ್ಷಣ ಪ್ರಸಾರ, ಶಿಕ್ಷಣ ಸುಧಾರಣೆ ಬಸವಾದಿ ಶರಣರು ಪ್ರತಿಪಾದಿಸಿದ ಧರ್ಮ, ತತ್ವಗಳು, ಪರಿಸರ ಪ್ರಜ್ಞೆ, ಕೃಷಿ, ಸಮಾಜ ಸೇವೆ, ಸರ್ವಧರ್ಮ ಸಮಾನ ದೃಷ್ಟಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾಜಕ್ಕೆ ಮಾದರಿಯಾದವರು. ಹಂಪಿ ಹೊಸಪೇಟೆ ಹಾಲಕೆರೆ, ಬಳ್ಳಾರಿ, ಶಿವಯೋಗ ಮಂದಿರ, ಒಳಬಳ್ಳಾರಿ ಹೀಗೆ ಹಲವಾರು ಮಠಗಳಲ್ಲಿ ಸಮಾಜ ಪರ ಕೆಲಸಗಳನ್ನು ನಿರ್ವಹಿಸಿ ಸಮಾಜಕ್ಕೆ ಕೊಟ್ಟ ಕೊಡುಗೆ ಅಪಾರವಾದದ್ದು. ಎಲ್ಲ ಧರ್ಮಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಿದ ಕಾರ್ಯಗಳು ವಿಶಿಷ್ಟವಾದದ್ದಾಗಿದೆ. ಪೂಜ್ಯ ಸಂಗನಬಸವ ಮಹಾಸ್ವಾಮಿಗಳು ಮಾಡಿದ ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ಬಸವ ಪುರಾಣ ಪ್ರವಚನಕ್ಕೆ ಹೊಸ ಆಯಾಮವನ್ನು ಕೊಟ್ಟಿದ್ದು ಹಾಗೂ ಸರ್ವಧರ್ಮ ಸಮನ್ವಯದ ರಥವನ್ನು ಸಮಾಜಕ್ಕೆ ಪರಿಚಯಿಸಿದವರು. ಗ್ರಾಮೀಣ ಪ್ರದೇಶದ ಜನರ ಮನೆಮನೆಗಳಿಗೆ ತಲುಪಿಸುವ ಸಂಚಾರಿ ಬಸವ ಪುರಾಣ ಎಂಬ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಅಖಂಡ ಬಳ್ಳಾರಿ ಜಿಲ್ಲೆಯ ಪ್ರತಿಯೊಂದು ಗ್ರಾಮಗಳಿಗೂ ಬಸವ ಪುರಾಣದ ವಾಹನ ಸಂಚರಿಸಿ, ಹಳ್ಳಿ ಹಳ್ಳಿಗಳಲ್ಲಿ ಬಸವ ಪುರಾಣದ ತತ್ವಗಳನ್ನು, ಆಚರಣೆಗಳನ್ನು ಪ್ರವಚನದ ಮೂಲಕ ಜನರಿಗೆ ತಲುಪಿಸಿದ ಕೀರ್ತಿ ಪೂಜ್ಯರಿಗೆ ಸಲ್ಲುತ್ತದೆ. ಬಸವ ಜ್ಯೋತಿಯ ಮೆರವಣಿಗೆ, ಸಂಜೆ ಬಸವ ಪ್ರವಚನವನ್ನು ಸಾಮೂಹಿಕವಾಗಿ ಕೇಳುವ ಮತ್ತು ಸಾಮೂಹಿಕವಾಗಿ ಪ್ರಸಾದವನ್ನು ಸ್ವೀಕರಿಸುವ ಒಂದು ಹೊಸ ವ್ಯವಸ್ಥೆಯನ್ನು ಪೂಜ್ಯರು ಕಲ್ಪಿಸಿಕೊಟ್ಟವರು.

## ಸರ್ವಧರ್ವ ಸಮನ್ವಯದ ರಥೋತ್ಸವ



ಪೂಜ್ಯ ಸಂಗನಬಸವ ಮಹಾಸ್ವಾಮಿಗಳು ಮತ್ತೊಂದು ವಿಚಾರಧಾರೆ ಎಂದರೆ ಮಠಗಳಲ್ಲಿ ಸಾಂಪ್ರದಾಯಿಕ ರಥವನ್ನು ಎಳೆಯದೆ ಸರ್ವಧರ್ಮ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಶರಣರ ರಥವನ್ನು ಎಳೆಯುವ ಹೊಸ ಚಿಂತನೆ ಪರಂಪರೆಯನ್ನು ಪ್ರಾರಂಭಿಸಿದವರು ಮಠಕ್ಕೆ ವಿವಿಧ ಧರ್ಮದ ಮುಖಂಡರುಗಳನ್ನು ಗೌರವ ಪೂರ್ವಕವಾಗಿ ಆಹ್ವಾನಿಸಿ ಅವರನ್ನು ಸತ್ಕರಿಸಿದವರು. ದೇಶದ ಸಂವಿಧಾನ ಹಾಗೂ ವಿವಿಧ ಧರ್ಮ ಗ್ರಂಥಗಳಾದ ಪುರಾಣ, ವಚನ ಗ್ರಂಥಗಳು, ಭಗವದ್ಗೀತೆ, ಬೈಬಲ್, ಕುರಾನ್, ಗುರು ಗ್ರಂಥ ಸಾಹೇಬ್, ವಾಲ್ಮೀಕಿ ರಾಮಾಯಣ ಮೊದಲಾದ ಧಾರ್ಮಿಕ ಗ್ರಂಥಗಳನ್ನು ಒಂದೆಡೆ ಇರಿಸಿ ಇವುಗಳನ್ನು ಸಮಾನವಾಗಿ ಗೌರವಿಸುವ ಹಾಗೂ ಸಂಜೆ ಇವೆಲ್ಲವುಗಳನ್ನು ಸರ್ವಧರ್ಮದ ರಥದಲ್ಲಿ ಇರಿಸಿ ರಥವನ್ನು ಎಳೆಯುವ ಹೊಸ ಪದ್ಧತಿಯನ್ನು ಆರಂಭಿಸಿದವರು. ಜಾತಿ ಧರ್ಮಗಳ ಸಂಘರ್ಷದ ಈ ಕಾಲಘಟ್ಟದಲ್ಲಿ ಎಲ್ಲ ಧರ್ಮಗಳನ್ನು ಎಲ್ಲ ಧರ್ಮ ಗ್ರಂಥಗಳನ್ನು ಗೌರವಿಸುವ ಸಮಾನವಾಗಿ ಕಾಣುವ ವಿಭಿನ್ನ ಹಾಗು ವಿಶಿಷ್ಟವಾದ ಚಿಂತನೆಯನ್ನು ಮಾಡಿ ಅದನ್ನು ಕಾರ್ಯರೂಪಕ್ಕೆ ತಂದವರು ಹಿರಿಯ ಪೂಜ್ಯ ಸಂಗನಬಸವ ಮಹಾಸ್ವಾಮಿಗಳು. ಇಷ್ಟೇ ಅಲ್ಲ ಮಠದಲ್ಲಿ ಸರ್ವ ಧರ್ಮದ ಪ್ರವಚನವನ್ನು ವಾರಗಟ್ಟಲೆ ಏರ್ಪಡಿಸುವುದರ ಮೂಲಕ ದಿನವೂ ಜನಸಾಮಾನ್ಯರಿಗೆ ಎಲ್ಲಾ ಧರ್ಮಗಳ ಸಾರವನ್ನು ತಿಳಿಯಪಡಿಸುವ ಮಹತ್ಕಾರ್ಯವನ್ನು ಪ್ರಾರಂಭಿಸಿದವರು. ಈ ವಿಶಿಷ್ಟವಾದ ಸರ್ವಧರ್ಮಗಳ ಸಮನ್ವಯದ ರಥೋತ್ಸವದ ಆಚರಣೆಯನ್ನು ಈಗಿನ ಪೀಠಾಧ್ಯಕ್ಷರಾದ ಪೂಜ್ಯ ಕೊಟ್ಟೂರು ಬಸವಲಿಂಗ ಶ್ರೀಗಳು ಸಹ ಮುಂದುವರಿಸಿದ್ದಾರೆ. ಹಿರಿಯ ಗುರುಗಳ ಆಶಯದಂತೆ ಸರ್ವ ಧರ್ಮದ ಗ್ರಂಥಗಳಿಗೆ ಗೌರವ ಸಮರ್ಪಣೆ, ಸರ್ವ ಧರ್ಮದ ಸಮಾನತೆಯ ಸಮ ಸಮಾಜಕ್ಕಾಗಿ ಶ್ರಮಿಸುವ ಜನರನ್ನು ಗೌರವಿಸುವ, ಸರ್ವಧರ್ಮದ ಪ್ರವಚನ ಹಾಗೂ ದಾಸೋಹ ಕಾರ್ಯವನ್ನು ಚಾಚು ತಪ್ಪದೆ ಈಗಿನ ಶ್ರೀಗಳು ಸಹ ಪಾಲಿಸುತ್ತಿದ್ದಾರೆ. ಇದರ ಅಂಗವಾಗಿ ಕಳೆದ ಒಂಬತ್ತು ದಿನಗಳಿಂದ ವಿಶ್ವಧರ್ಮ ಪ್ರವಚನ 10ನೇ ದಿವಸ ಸರ್ವಧರ್ಮ ರಥೋತ್ಸವ, ಅನ್ನದಾಸೋಹ ನಡೆಯುತ್ತಿದೆ. ಕೊಟ್ಟೂರುಸ್ವಾಮಿ ಮಠದ ಈ ಸರ್ವಧರ್ಮ ಸಮಾನತೆಯ ಕಾರ್ಯವನ್ನು ನೋಡಿದಾಗ ವಿಜಯನಗರ ಸಾಮ್ರಾಜ್ಯದ ಪ್ರೌಢ ದೇವರಾಯನ ಕಾಲದ ಪರಂಪರೆ ಈಗ ಮಠದ ಮೂಲಕ ಮತ್ತೆ ಪುನರುಜ್ಜೀವನ ಪಡೆದುಕೊಂಡಿದೆ.

## ಸಮಾಜಪ್ರೇಮಿ



ಎನಗೆ ಸಮಾಜಸೇವೆವೊಂದನಳಿದು
ಮತ್ತಾವುದೂ ಬೇಡವೆಂದು
ಹುಟ್ಟಿಗಂಟಿದ ಕರುಳಬಳ್ಳಿ
ಕಳಚಿ ಹಾಕಿದಿರಿ ನೀವು – ಆ ದಿನ

ಸಮಾಜ ಸುಕೃತವೋ, ಭುವಿಯ ಭಾಗ್ಯವೋ
ಹೊಸಪೇಟೆ–ಹಾಲ್ಕೆರೆಂಬುದಕೆಲ್ಲ
ಲೇಸನಾಸರೆಯಾಗಿ
ಧರ್ಮಕ್ರಾಂತಿಯೂ ಆಯಿತು ನಿಮ್ಮಿಂದ _ ಅನುದಿನ

ಬಸವಕುಮಾರ ನಂತರ ನೀವು
ಸದ್ದುಗದ್ದಲವಿಲ್ಲದೆ
ಬಸವನಾಶಯ ಕುಮಾರತತ್ತ್ವಗಳನ್ನೆಲ್ಲ
ಸರ್ವಜನಕುಣಬಡಿಸಿದ ಸರ್ವೇಶ್ವರರು

ಶ್ರುತಿಯ ಕೃತಿಗೆ ತಂದು
ಮೇಲುಕೀಳುಗಳೆಂಬ ಮಾಲಿನ್ಯವನಳಿದು
ಸಮಸಮಾಜ ಸೂತ್ರದ ಸ್ಥಿತಪ್ರಜ್ಞ ಮಂದಾರ
ಅನ್ನ–ಅಕ್ಷರ–ದಾಸೋಹದ ಸೂತ್ರದಾರ

ವೀರಶೈವ–ಲಿಂಗಾಯತ ಬೇರೆಂಬ
ಧರ್ಮಬೇಗೆಯನಳಿಸಿ
ಗುರು–ವಿರಕ್ತರೆಲ್ಲರ ಒಂದುಗೂಡಿಸಿ
ಶಿವಮಂದಿರದಿ ಕ್ರಾಂತಿಯು ಆಯಿತು – ನಿಮ್ಮಿಂದ

ಶಿವತತ್ತ್ವದ ಕಂಪು
ಪಾರಮಾರ್ಥದ ಇಂಪು ನಾಡಿನೆಲ್ಲಡೆ ಪಸರಿಸಿ
ಬಯಲಲ್ಲಿ ಮಹಾಬಯಲಾಗಿ
ಹೊರಟ ಹೋದಿರಿ ನೀವು –ಆ ದಿನ
ಮರಳಿ ಬಂದೆ ಬರುವಿರೆಂಬ ನಂಬಿಕೆ
ಭಕ್ತಾನುಗ್ರಾಹಿ ಬಾರದಿರುವನೇ?
ಮತ್ತದೆ ಮುನ್ನಿನ ಹೊನ್ನಬೆಳಕನು
ಪಸರಿಸಿ, ಶಿವಗಂಗಾಸುತನಿಗೆ ಹರಸದಿರುವನೇ?

– ಶರಣಯ್ಯ ಎಸ್.ಚರೇದ (ಚರಂತಿಮಠ)
ಹೊಸಪೇಟೆ

## ಸರ್ವಧರ್ಮ ಸಮನ್ವಯ ರಥೋತ್ಸವ



ಎಳೆಯೋಣ ಬನ್ನಿರಿ.............ಎಳೆಯೋಣ ಬನ್ನಿರಿ
ಸರ್ವಧರ್ಮ ಸಮನ್ವಯ ರಥ ಎಳೆಯೋಣ ಬನ್ನಿರಿ
ಬನ್ನಿರಮ್ಮ ಬನ್ನಿರಣ್ಣ .ರಥ ಎಳೆಯೋಣ ಬನ್ನಿರಿ
ಜಗದೆಲ್ಲೆಡೆಗೂ ರಥವ ಕೊಂಡೊಯ್ಯೋಣ ಬನ್ನಿರಿ

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ
ತ್ರಿವಿಧ ದಾಸೋಹದಿ ಕಲಿಸುತಿಹುದು ಜೀವನ ಪಾಠ
ಇಹುದು ಶ್ರೀಮಠಕೆ ಘನ ಇತಿಹಾಸದ ಹಿರಿಮೆ
ಇದು ಪಶುತ್ವದಿ ಮಾನವತ್ವಕೆ ಒಯ್ಯು ಕುಲುಮೆ

ಪರಮಪೂಜ್ಯ ಲಿಂಗೈಕ್ಯ ಜ.ಡಾ.ಸಂಗನಬಸವಜ್ಜರು
ಹುಟ್ಟುಹಾಕಿಹರು ಸರ್ವಧರ್ಮ ಸಮನ್ವಯ ತೇರು
ಅಷ್ಟವರ್ಷದಿ ಜರುಗುತಿಹುದಿಲ್ಲಿ ಬಲು ಜೋರು
ಅಂತರಾತ್ಮದಿ ಶ್ರದ್ಧೆ, ಭಕ್ತಿ, ನಿಷ್ಠೆಯ ನೀ ತೋರು

ಹಂಪಿ ಹೇಮಕೂಟ ಶೂನ್ಯಸಿಂಹಾಸನಾಧೀಶ್ವರ
ಜ.ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರ
ಸಾರಥ್ಯದೊಳು ಮುನ್ನಡೆಯುತಿಹುದಿದು ನಿರಂತರ
ತೊಲಗಿಸುತಿಹುದು ಜಾತಿ,ಮತಧರ್ಮಗಳ ಅಂತರ

ಈಶ್ವರಲ್ಲಾ,ಯೇಸು,ಬುದ್ಧ,ದೇವರೊಬ್ಬನೇ ಎನ್ನಿರಿ
ದೇವನ ಮಕ್ಕಳಾಗಿ ಸರ್ವಧರ್ಮ ಸಾರ ಫಲ ತಿನ್ನಿರಿ
ಜಾತಿ,ಧರ್ಮ ಸಂಘರ್ಷ ಕೊನೆಗಾಣಿಸೋಣ ಬನ್ನಿರಿ
ಜಾತ್ಯತೀತ,ಧರ್ಮಾತೀತರಾಗಿ ಬಾಳೋಣ ಬನ್ನಿರಿ

ಜಾತಿಭೇದ,ಧರ್ಮಭೇದ ತೊರೆಯೋಣ ಬನ್ನಿರಿ
ಸಹಬಾಳ್ವೆ ನಡೆಸಿ ಐಕ್ಯತೆ ಸಾಧಿಸೋಣ ಬನ್ನಿರಿ
ಮನುಕುಲದುದ್ಧಾರಕೆ ಶ್ರಮಿಸೋಣ ಬನ್ನಿರಿ
ವಿಶ್ವ ಮಾನವ ಸಂದೇಶ ಲೋಕಕೆ ಸಾರೋಣ ಬನ್ನಿರಿ

– ಎಲ್ ಹಾಲ್ಯಾನಾಯ್ಕ (ಗೋಸಿಂಹಾ)
ಹೊಸಪೇಟೆ

# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026








ಸಂಪುಟ:02 • ಸಂಚಿಕೆ: 224 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 10.03.2025 • ಸೋಮವಾರ • ಪುಟ:04 • ಬೆಲೆ:2

Volume:02 • Issue: 224 • PRGI No:KARKAN/2023/88055 • VIJAYANAGARA • 10.03.2025 • Monday • Page:04 • Rs:2



**ದೇವಾಲಯ ದರ್ಶನ**



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ



**Call Us for Advertisements**
Good Opportunity for Branding

ನಿಮ್ಮೂರ ಜಾತ್ರೆ ಉತ್ಸವಕ್ಕೆ
ಸ್ವಾಗತ/ಶುಭಾಶಯ ಕೋರಲು
ಬಯಸುವವರು
ಇಂದೇ ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


# ದೇಹ ಅಳಿದರೂ ಸತ್ಕಾರ್ಯಗಳು ಶಾಶ್ವತ

### ಶ್ರೀ ಜಗದ್ಗುರು ಬಸವಲಿಂಗ ಮಹಾಸ್ವಾಮಿಗಳು ಆಶೀರ್ವಚನ | ಧರ್ಮ, ಸೇವೆ ಮತ್ತು ಪರೋಪಕಾರ್ಯಗಳು ನಿರಂತರವಾಗಿರಲಿ






■ **ಹಂಪಿ ಟೈಮ್ಸ್ ಹೊಸಪೇಟೆ**

ದೇವರು ನಮ್ಮನ್ನು ಈ ಭೂಮಿಗೆ ಕಳಿಸಿದ್ದಾನೇಕ ಎಂಬ ಚಿಂತನೆಗಳು ನಡೆಯಬೇಕಿದೆ. ಈ ಭೂಮಿಗೆ ಬಂದ ಮನುಷ್ಯರು ತಮ್ಮ ಆಸೆಗಳನ್ನು ನಿಗ್ರಹಿಸಿಕೊಂಡು ಇರುವ ಇತಿಮಿತಿ ಆಸೆಗಳನ್ನು ಸಹ ಧರ್ಮಮಾರ್ಗವಾಗಿ ಪೂರೈಸಿಕೊಂಡಾಗ ಮಾತ್ರ ಈ ಭೂಮಿಗೆ ಮನುಷ್ಯನಾಗಿ ಹುಟ್ಟಿ ಬಂದದ್ದಕ್ಕೂ ಸಾರ್ಥಕವಾಗುತ್ತದೆ ಎಂದು ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ನಗರದ ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ 8ನೇ ವರ್ಷದ ಸರ್ವಧರ್ಮ ಸಮನ್ವಯ ಮಹಾರಥೋತ್ಸವದಂಗವಾಗಿ ಹಮ್ಮಿಕೊಂಡಿರುವ ವಿಶ್ವಧರ್ಮ ಪ್ರವಚನ ಮಂಗಲೋತ್ಸವ ಸಾನ್ನಿಧ್ಯವಹಿಸಿ ಭಾನುವಾರ ಆಶೀರ್ವಚನ ನೀಡಿದರು. ಪಂಚೇಂದ್ರಿಯಗಳಿಗೆ ದೊರೆಯುವ ಸುಖ ತಾತ್ಕಾಲಿಕ. ಪರೋಪಕಾರದಲ್ಲಿ ಕಾಣುವ ಸುಖ ಶಾಶ್ವತವಾಗಿರುತ್ತದೆ. ವಿಶ್ವಧರ್ಮ ಪ್ರವಚನ ಇಂದು ಸಮಾರೋಪಗೊಂಡಿರುವುದು ಕೇವಲ ಸಾಮೂಹಿಕ ಚಿಂತನಗಷ್ಟೇ. ಪ್ರತಿಯೊಬ್ಬರೂ ಸ್ವಾಧ್ಯಯದ ಮೂಲಕ ಲೋಕ ಕಲ್ಯಾಣಕ್ಕಾಗಿ ಚಿಂತನೆಗಳನ್ನು ಮಾಡಬೇಕು. ನಮ್ಮ ಸುತ್ತಮುತ್ತಲಿರುವವರನ್ನು ಸ್ನೇಹ, ಪ್ರೀತಿಯಿಂದ ಕಾಣುವುದರೊಂದಿಗೆ ಪ್ರತಿಯೊಬ್ಬರ ಏಳ್ಗೆಗೆ ಕೈಜೋಡಿಸಬೇಕು. ಈವರೆಗೂ ಸಾಗಿಸಿದ ನಮ್ಮ ಬದುಕಿನ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು.ಸಣ್ಣತನಗಳನ್ನು ಬಿಡಬೇಕು. ಎಲ್ಲರ ಹೃದಯಕ್ಕೆ ಖುಷಿ ಕೊಡುವ ಮತ್ತು ಜಗಕ್ಕೆ ಆನಂದ ಕೊಡಬಲ್ಲ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು. ವಿಶ್ವಧರ್ಮದ ಸಾರವನ್ನು ಪ್ರತಿಯೊಬ್ಬರು ಅರಿಯುವ ನಿಟ್ಟಿನಲ್ಲಿ ಚಿಂತನೆಗಳು ನಡೆಯಲಿ ಎಂದರು.

ತಿಂಥಣಿಬ್ರಿಜ್ ಶ್ರೀ ಕನಕಗುರುಪೀಠದ ಪೂಜ್ಯಶ್ರೀ ಸಿದ್ಧರಾಮಾನಂದ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತಾ, ನಮ್ಮೊಳಗೆ ಭಾವನೆಗಳು ಭಿನ್ನವಾಗಿವೆ. ಭಾವನೆಗಳು ಸಂಗಮವಾದರೆ ಭಾವೈಕ್ಯ. ಭಾವನೆಗಳು ಭಿನ್ನವಾದರೆ ಬದುಕು ಭಾರವಾಗುತ್ತದೆ. ನಾವುಗಳು ನಮ್ಮ ಭೌತಿಕ ಅಂತಸ್ಥಿಗಿಂತ ಆಂತರಿಕ ಶ್ರೀಮಂತಿಕೆಗೆ ತಲೆಭಾಗಬೇಕಿದೆ. ಪ್ರತಿಯೊಬ್ಬರನ್ನು ಪ್ರೀತಿಸುವುದು ಮನುಷ್ಯನ ಗುಣವಾಗಬೇಕು. ಬಸವಾದಿ ಶರಣರು, ಪೈಗಂಬರರು, ದಾರ್ಶನಿಕರು ಹೇಳಿದ್ದನ್ನು ಅರಿತು ಅಳವಡಿಸಿಕೊಂಡಾಗ ಮಾತ್ರ ಜೀವನ ಸುಖಮಯವಾಗುತ್ತದೆ. ಜಾತಿ ಪಿಡುಗು ತೊಲಗಿಸಿದಾಗ ಮಾತ್ರ ಅಮೃತ ಪುತ್ರರಾಗುತ್ತೇವೆ ಎಂದರು.

ತಂಗಡಗಿ ಶ್ರೀ ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನಮಠದ ಶ್ರೀ ಜಗದ್ಗುರುಅನ್ನದಾನ ಭಾರತಿ ಅಪ್ಪಣ್ಣ ಮಹಾಸ್ವಾಮಿಗಳು, ಚಿತ್ರದುರ್ಗದ ಶ್ರೀ ಕೇತೇಶ್ವರಮಠ ಮೇದಾರ ಗುರುಪೀಠದ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಸಮಾಜದ ಮುಖಂಡರಾದ ಬಿ.ಕೆ.ಜಿ.ನಾಗನಗೌಡ, ಕೆ.ಎಸ್.ನಾಗರಾಜ, ಗುಜ್ಜಲ ಶ್ರೀನಾಥ, ಬಂಡೆ ರಂಗಪ್ಪ, ಕೆ.ಎಂ.ಹಾಲಪ್ಪ, ಭೂಪಾಳ ರಾಘವೇಂದ್ರ ಶೆಟ್ರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಚಿಕ್ಕ ಅಸಂಗಿಯ ಅನುಭಾವಿಗಳಾದ ಪೂಜ್ಯಶ್ರೀ ವೀರಬಸವ ದೇವರು ವಿಶ್ವಧರ್ಮ ಪ್ರವಚನ ಮಂಗಲೋತ್ಸವ ನುಡಿದರು.

ಹಿರಿಯ ನ್ಯಾಯವಾದಿ ಹೆಚ್.ಪಿ.ಕಲ್ಲಂಭಟ್ ನಿರ್ವಹಿಸಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.









## ಮಾದಕ ವಸ್ತುಗಳಿಂದ ದೂರವಿರಿ: ಐಜಿಪಿ ಲೋಕೇಶ್ ಕುಮಾರ್




**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ರಾಜ್ಯ ಪೊಲೀಸ್ ರನ್–2025 ಕಾರ್ಯಕ್ರಮ ಅಂಗವಾಗಿ ಬಳ್ಳಾರಿ ಜಿಲ್ಲಾ ಪೊಲೀಸ್ ವತಿಯಿಂದ 'ನಮ್ಮೆಲ್ಲರ ಸದೃಡತೆ ಮತ್ತು ಡಗ್ಸ್ ಮುಕ್ತ ಕರ್ನಾಟಕ ನಿರ್ಮಾಣ' ಎಂಬ ಧ್ಯೇಯವಾಕ್ಯದೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ನಗರದ ಕನಕ ದುರ್ಗಮ್ಮ ದೇವಸ್ಥಾನ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ 5ಕೆ ಪೊಲೀಸ್ ರನ್ ಕಾರ್ಯಕ್ರಮಕ್ಕೆ ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ, ಯುವ ಸಮುದಾಯವು ಮಾದಕ ವಸ್ತುಗಳಿಂದ ದೂರವಿರಬೇಕು ಎಂದು ಕರೆ ನೀಡಿದರು.



## ಇಂದು ಸರ್ವಧರ್ಮ ಮಹಾರಥೋತ್ಸವ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನಮಠದಿಂದ ಮಾ,10 ರಂದು ಬೆಳಿಗ್ಗೆ 10.30ಕ್ಕೆ ಜಗದ್ಗುರು ಡಾ.ಸಂಗನಬಸವ ಮಹಾಸ್ವಾಮಿಗಳವರ ತೃತೀಯ ಪುಣ್ಯಸ್ಮರಣೋತ್ಸವದಂಗವಾಗಿ 1111 ಮುತ್ತೈದೆಯರಿಗೆ ಉಡಿ ತುಂಬುವ ಸಮಾರಂಭ ಜರುಗಲಿದೆ.

ಅದಕ್ಕೂ ಮುನ್ನ ಹೇಮಕೂಟ ಮಹಾದ್ವಾರ ಭೂಮಿಪೂಜೆಯನ್ನು ವಳಬಳ್ಳಾರಿ ಶ್ರೀಸುವರ್ಣಗಿರಿ ವಿರಕ್ತಮಠದ ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಗಳು ನೆರವೇರಿಸಲಿದ್ದಾರೆ.

ಸಂತೆ ಕಲ್ಲೂರಿನ ಘನಮಠೇಶ್ವರಮಠದ ಶ್ರೀ ಗುರುಬಸವ ಮಹಾಸ್ವಾಮಿಗಳು ನೇತೃತ್ವದಲ್ಲಿ., ನಂದವಾಡಗಿ–ಆಳಂದದ ಶ್ರೀ ಮಹಾಂತೇಶ್ವರ ಹಿರೇಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಅಧ್ಯಕ್ಷತೆವಹಿಸಲಿದ್ದಾರೆ. ನಂದಿಪುರದ ಡಾ.ಮಹೇಶ್ವರ ಮಹಾಸ್ವಾಮಿಗಳು, ದರೂರಿನ ಶ್ರೀ ಕೊಟ್ಟೂರು ಮಹಾಸ್ವಾಮಿಗಳೂ, ಕುರುಗೋಡಿನ ಶ್ರೀ ನಿರಂಜನಪ್ರಭು ಮಹಾಸ್ವಾಮಿಗಳು, ಸೋಮಸಮುದ್ರದ ಶ್ರೀ ಸಿದ್ಧಲಿಂಗ ದೇಶಿಕರು., ಶ್ರೀಧರಗಡ್ಡೆಯ ಶ್ರೀ ಮರಿಕೊಟ್ಟೂರು ದೇಶಿಕರು, ಸಂಗನಹಾಳದ ಶ್ರೀವಿಶ್ವೇಶ್ವರ ದೇವರು, ಆದೋನಿಯ ಶ್ರೀಗುರು ಸಿದ್ಧ ದೇವರು ಉಪಸ್ಥಿತರಿರಲಿದ್ದಾರೆ.

ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ ಉದ್ಘಾಟಿಸಲಿದ್ದಾರೆ. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಪೂಜ್ಯ ಶ್ರೀ ಜಗದ್ಗುರು ಡಾ.ಸಂಗನಬಸವ ಮಹಾಸ್ವಾಮಿಗಳ ಭಕ್ತಿಗೀತೆಗಳ ಧ್ವನಿತಟ್ಟೆ (ಸಿಡಿ) ಬಿಡುಗಡೆಗೊಳಿಸುವರು.

ಸಂಜೆ 5.30ಕ್ಕೆ ಸರ್ವಧರ್ಮ ಸಮನ್ವಯ ಮಹಾರಥೋತ್ಸವಕ್ಕೆ ಶಿವಮೊಗ್ಗದ ಪೂಜ್ಯ ನಿ.ಜ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಚಾಲನೆ ನೀಡಲಿದ್ದಾರೆ.

ಸಂಜೆ 6ಕ್ಕೆ ಶಿವಾನುಭವಗೋಷ್ಠಿ ಜರುಗಲಿದೆ. ಶ್ರೀ ಹರ್ಡೇಕರ ಮಂಜಪ್ಪನವರು ರಚಿಸಿದ ಬಸವ ಚರಿತ್ರೆ ಗ್ರಂಥವನ್ನುಸಂಸದ ಈ.ತುಕರಾಂ ಬಿಡುಗಡೆಗೊಳಿಸಲಿದ್ದಾರೆ. ನಂತರ ಕಡ್ಡಿರಾಂಪುರದ ಕೆ.ರಾಮು ಹಗಲುವೇಷ ಕಲಾ ತಂಡದಿಂದ ಮೋಹಿನಿ ಭಸ್ಮಾಸುರ ಕಥಾಪ್ರಸಂಗ ಪೌರಾಣಿಕ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ, ಸರ್ವ ಸಮಾಜದವರು ರಥೋತ್ಸವದಲ್ಲಿ ಪಾಲ್ಗೊಂಡು ಭಾವೈಕ್ಯತೆಯ ಸಂದೇಶ ಸಾರಬೇಕೆಂದು ಎಂದು ಶ್ರೀಮಠ ತಿಳಿಸಿದೆ.